# 23. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಗ್ಗೋಡು, ತೀರ್ಥಹಳ್ಳಿ ತಾ!!

## ಪೀಠಿಕೆ:–

ಸಹ್ಯಾದ್ರಿಯ ಸುಂದರ ಮಡಿಲಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಗ್ಗೋಡು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಈ ಶಾಲೆಯು 1930ರಲ್ಲಿ ಪ್ರಾರಂಭಗೊಂಡಿದ್ದು ಸುಸಜ್ಜಿತವಾದ 8 ಕೊಠಡಿಗಳನ್ನು ಹೊಂದಿದೆ. ಇದರಲ್ಲಿಒಂದು ಮುಖ್ಯಶಿಕ್ಷಕರ ಕೊಠಡಿ, ಆರು ತರಗತಿ ಕೊಠಡಿಗಳು ಹಾಗು ಇನ್ನೊಂದು ಗ್ರಂಥಾಲಯ ಕೊಠಡಿಯಾಗಿ ಬಳಸಲಾಗುತ್ತಿದೆ.

ಈ ಶಾಲೆಯಲ್ಲಿ 1 ರಿಂದ 7ನೇ ತರಗತಿಯ ವರೆಗೆ ಒಟ್ಟು 44 ಮಕ್ಕಳು, 4 ಶಿಕ್ಷಕರು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. 2018–19ನೇ ಸಾಲಿನಲ್ಲಿ ಎಲ್.ಕೆ.ಜಿ ಹಾಗು ಯು.ಕೆ.ಜಿ ತರಗತಿಗಳನ್ನು ಪ್ರಾರಂಭಿಸಲಾಗಿದ್ದು 8 ಮಕ್ಕಳು ದಾಖಲಾಗಿರುತ್ತಾರೆ. ಈ ತರಗತಿಯನ್ನು ನಿರ್ವಹಿಸಲು ಎಸ್‌ಡಿಎಮ್‌ಸಿ, ಹಳೆ ವಿದ್ಯಾರ್ಥಿಗಳ ಸಂಘ ಹಾಗೂ ಪೋಷಕರ ಸಹಕಾರದಿಂದ ಗೌರವ ಶಿಕ್ಷಕರನ್ನು ನೇಮಿಸಿ ಸಂಭಾವನೆ ನೀಡಲಾಗುತ್ತಿದೆ.

## ಶಾಲಾ ಸೌಲಭ್ಯಗಳು:–






### 1. ಕಂಪ್ಯೂಟರ್ ಶಿಕ್ಷಣ:–

ಪ್ರಸ್ತುತ ಜಗತ್ತಿನಲ್ಲಿ ಕಂಪ್ಯೂಟರ್ ಶಿಕ್ಷಣ ಅತೀ ಅಗತ್ಯ. ಕಂಪ್ಯೂಟರ್ ಬಳಸದ ಮಾನವ ಈ ಆಧುನಿಕ ಜಗತ್ತಿನಲ್ಲಿ ಅನಕ್ಷರಸ್ಥ ಎನ್ನುವ ಸ್ಥಿತಿಯಲ್ಲಿ ನಾವಿದ್ದೇವೆ. ಹಾಗಾಗಿ ಬದಲಾವಣೆಗೆ ತಕ್ಕಂತೆ ನಾವು ಬದಲಾಗ ಬೇಕಾದ ಕಾರಣ ಶಿಕ್ಷಣ ನೀಡುವ ವಿಧಾನ ಕೂಡಾ ಬದಲಾಗ ಬೇಕಾಗಿದೆ. ಇದರ ಅಂಗವಾಗಿ ನಮ್ಮ ಶಾಲೆಯಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನಾವು ಈಗಾಗಲೆ ಮಕ್ಕಳಿಗೆ ನೀಡುತ್ತಿದ್ದೇವೆ. ದಾನಿಗಳ ನೆರವಿನಿಂದ 4 ಕಂಪ್ಯೂರ್, ಸಿಪಿಯು ಹಾಗೂ ಯುಪಿಎಸ್‌ಗಳನ್ನು ಕೊಡುಗೆಯಾಗಿ ಪಡೆಯಲಾಗಿದೆ. ಕಂಪ್ಯೂಟರ್ ಶಿಕ್ಷಣ ನೀಡಲು ಗೌರವ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. 4ನೇ ತರಗತಿಂದ 7ನೇ ತರಗತಿಯ ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ.

### 2. ಎಲ್.ಕೆ.ಜಿ ಮತ್ತು ಯು.ಕೆ.ಜಿ. ಪ್ರಾರಂಭ:–

ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎಲ್.ಕೆ.ಜಿ ಮತ್ತು ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಲಾಗಿದ್ದು, ಈ ತರಗತಿಗಳನ್ನು ನಿರ್ವಹಿಸಲು ಓರ್ವ ಶಿಕ್ಷಕರನ್ನು ನಿಯೋಜನೆ ಮಾಡಿಕೊಂಡಿದ್ದು, ಎಸ್‌ಡಿಎಮ್‌ಸಿ ಹಾಗೂ ಹಳೇ ವಿದ್ಯಾರ್ಥಿ ಸಂಘ, ಪೋಷಕರಿಂದ ಶಿಕ್ಷಕರಿಗೆ ಸಂಭಾವನೆ ನೀಡಲಾಗುತ್ತಿದೆ. ಸಕಾರಿ ಶಾಲೆ ದಾಖಲಾತಿಯನ್ನು ಹೆಚ್ಚಿಸಲು ಇದು ಸಹಕಾರಿಯಾಗಿದೆ.





**3. ಗ್ರಂಥಾಲಯ:–**

ದಾನಿಗಳಿಂದ ಸುಮಾರು 50000/ ರೂ.ಗಳಿಂದ ಸಹಕಾರ ಪಡೆದು ವ್ಯವಸ್ಥಿತವಾದ ಗ್ರಂಥಾಲಯ ಮಾಡಲಾಗಿದೆ. ಶಾಸಕರ ನಿಧಿಯಿಂದ ಪುಸ್ತಕಗಳನ್ನು ಕೊಡುಗೆಯಾಗಿ ಪಡೆಯಲಾಗಿದೆ. ಗ್ರಂಥಾಲಯವು ಕನ್ನಡ, ಇಂಗ್ಲೀಷ್, ವಿಜ್ಞಾನ ಮುಂತಾದ ವಿಷಯಕ್ಕೆ ಸಂಬಂಧಿಸಿದ 2900ಕ್ಕೂ ಹೆಚ್ಚು ಪುಸ್ತಕಗಳನ್ನೊಳಗೊಂಡಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.





**4. ವ್ಯವಸ್ಥಿತ ಅಕ್ಷರದಾಸೋಹ :–**

ಈ ಕಾರ್ಯಕ್ರಮಕ್ಕೆ ದಾನಿಗಳಿಂದ ಮಿಕ್ಸಿ, ಕುಕ್ಕರ್, ತಟ್ಟೆ, ಲೋಟ, ರುಬ್ಬುವ ಕಲ್ಲು, ಮುಂತಾದವುಗಳನ್ನು ಕೊಡುಗೆಯಾಗಿ ಪಡೆಯಲಾಗಿದೆ. ಕಳೆದ 3 ವರ್ಷಗಳಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೊಜನೆ, ಪೋಷಕರು, ಗ್ರಾಮಸ್ಥರ, ಶಿಕ್ಷಕರ ನೆರವಿನಿಂದ ಶಾಲಾಕೈತೋಟ ನಿರ್ಮಿಸಿ ವಿವಿಧ ತರಕಾರಿಗಳನ್ನು ಬೆಳೆದು ಬಿಸಿಯೂಟಕ್ಕೆ ಬಳಸಲಾಗುತ್ತಿದೆ.





5. ಸ್ಮಾರ್ಟ್‌ಕ್ಲಾಸ್ ವ್ಯವಸ್ಥೆ:–

ದಾನಿಗಳ ನೆರವಿನಿಂದ ಸುಮಾರು 100000/ರೂ.ಗಳ ನೆರವಿನಿಂದ ಸ್ಮಾರ್ಟ್‌ಕ್ಲಾಸ್ ವ್ಯವಸ್ಥೆ ಮಾಡಲಾಗಿದೆ. ಇದರ ಸದುಪಯೋಗ ಎಲ್ಲಾ ಮಕ್ಕಳಿಗೂ ದೊರೆತು ಉತ್ತಮ ಶಿಕ್ಷಣ ಪಡೆಯಲು ಸಹಾಯಕವಾಗಿದೆ. ಟಿ ವಿ ಪರದೆ ಹಾಗೂ ಪ್ರೋಜೆಕ್ಟರ್ ವ್ಯವಸ್ಥೆ ಮಾಡಲಾಗಿದೆ. ಕೊಠಡಿಯ ಸುತ್ತಲೂ ಸೌಂಡ್ ಬಾಕ್ಸ್ ಜೋಡಿಸಲಾಗಿದೆ.


